ಕರ್ನಾಟಕ ವಿಧಾನಸಭೆ

ಸೋಮವಾರ 22ನೇ ಮಾರ್ಚ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10-20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:- ಶ್ರೀ ವಿ.ಎಸ್. ಕೌಜಲಗಿ ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಬಳ್ಳಾರಿ ತಾಲ್ಲೂಕಿನಲ್ಲಿ ಹಾನಿಯಾಗಿರುವ ರಸ್ತೆಗಳ ದುರಸ್ತಿ

2197: ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ತಾಲ್ಲೂಕಿನಲ್ಲಿ ಇತ್ತೀಚೆಗೆ ಬಿರುಗಾಳಿ ದಾಳಿಗೊಳಗಾಗಿ ಹಾಳಾದ ರಸ್ತೆಗಳ ದುರಸ್ತಿ ಬಗ್ಗೆ ಲೋಕೋಪಯೋಗಿ ಇಲಾಖೆಯು ಯಾವುದಾದರೂ ಕಾರ್ಯಕ್ರಮವನ್ನು ರೂಪಿಸಲು ಯೋಚಿಸಿದೆಯೇ;

ಆ) ಆಂಧ್ರಪ್ರದೇಶಕ್ಕೆ ಸೇರುವ ರಸ್ತೆಗಳ ಸಂಖ್ಯೆ ಎಷ್ಟು ಮತ್ತು ಈ ರಸ್ತೆಗಳನ್ನು ದುರಸ್ತಿಪಡಿಸಲು ಯಾವುದಾದರೂ ಯೋಜನೆ ಇದೆಯೇ;

ಇ) ಹೊಸ ಹಗರಿ ಸೇತುವೆಯನ್ನು ನಿರ್ಮಾಣ ಮಾಡುವ ಬಗ್ಗೆ ಪ್ರಸಕ್ತ ಪರಿಸ್ಥಿತಿ;

ಈ) ಇದು ಯಾವಾಗ ಮುಗಿಸಲು ಉದ್ದೇಶಿಸಲಾಗಿದೆ ?

ಶ್ರೀ ಕೆ.ಹೆಚ್ ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಒಂದು ಕಾರ್ಯಕ್ರಮದ ಪಟ್ಟಿಯನ್ನು ಬಳ್ಳಾರಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗಿದೆ.

ಆ) ಬಳ್ಳಾರಿ ತಾಲ್ಲೂಕಿನಲ್ಲಿ ಆಂಧ್ರಪ್ರದೇಶದ ಗಡಿಗೆ 9ರಸ್ತೆಗಳು ಸೇರುತ್ತವೆ. ತಾಳೂರಿನಿಂದ ಆಂಧ್ರ ಗಡಿ ಸೇರುವ ಒಂದು ರಸ್ತೆಯ ಅಭಿವೃದ್ಧಿಯನ್ನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿ ತೆಗೆದುಕೊಳ್ಳಲಾಗಿದೆ. ಮತ್ತು ಕಾಮಗಾರಿಯು ಪ್ರಗತಿಯಲ್ಲಿದೆ. ಉಳಿದ 8 ರಸ್ತೆಗಳನ್ನು ವಾರ್ಷಿಕ ನಿರ್ವಹಣಾ ಮತ್ತು ದುರಸ್ತಿ ಅನುದಾನದಲ್ಲಿ ಪ್ರತಿ ವರ್ಷವೂ ನಿರ್ವಹಿಸಲಾಗುವುದು.

ಇ) ಸೇತುವೆಯ ಎಲ್ಲಾ 23 ಕಂಬಗಳ ನಿರ್ಮಾಣವು ಮುಗಿದಿದೆ. 24 ಸ್ಪಾನ್‌ಗಳ ಪೈಕಿ 17 ಸ್ಪಾನ್‌ಗಳ ತೊಲೆಗಳು ನಿರ್ಮಾಣವಾಗಿದೆ. ಒಂದು ಭಾಗದ ಅಬಟ್‌ಮೆಂಟ್‌ನ ನಿರ್ಮಾಣವು ಪ್ರಗತಿಯಲ್ಲಿದೆ. ಮತ್ತೊಂದು ಭಾಗದ ಅಬಟ್‌ಮೆಂಟ್‌ನ ಕಾಮಗಾರಿಯು ಭೂಸ್ವಾಧೀನದ ತೊಂದರೆಯಿಂದ ನಿಧಾನವಾಗಿದೆ. ಸೇತುವೆಗಳ ಕೂಡು ರಸ್ತೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ) ಕಾಮಗಾರಿಗಳು 1994-95ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಅಲ್ಲಂ ವೀರಭದ್ರಪ್ಪ:- ಮಾನ್ಯ ಅಧ್ಯಕ್ಷರಿಗೆ, ಮಾನ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ, ನಮ್ಮ ಭಾಗದಲ್ಲಿ, ನವೆಂಬರ್ ತಿಂಗಳ ಪ್ರವಾಹದಲ್ಲಿ ಬಹಳಷ್ಟು ರಸ್ತೆಗಳು ಕೆಟ್ಟು ಹೋಗಿವೆ.

ಜಿಲ್ಲಾಧಿಕಾರಿಗಳಿಗೆ ವರದಿ ಕಳುಹಿಸಿದ್ದಾರೆಂದು ಹೇಳಿದ್ದಾರೆ. ತಾವು ದಯವಿಟ್ಟು ಎಕ್ಸ್‌ಟ್ರಾ ಅಲೋಕೇಷನ್ ಮಾಡಬೇಕೆಂದು ಹೇಳುತ್ತಾ, ಫ್ಲಡ್ ಪ್ರೊಟೆಕ್ಷನ್ ಫಂಡ್‌ನಲ್ಲಿ ಈ ವರ್ಷದಲ್ಲಿ ಬಳ್ಳಾರಿ ತಾಲ್ಲೂಕಿಗೆ ಹೆಚ್ಚು ಹಣವನ್ನು ಕೊಡಬೇಕೆಂದು ಹೇಳುತ್ತೇನೆ. ಮತ್ತೆ ಬಳ್ಳಾರಿಯಿಂದ ಆಂಧ್ರಪ್ರದೇಶಕ್ಕೆ ಬಹಳಷ್ಟು ರೋಡುಗಳು ಹೋಗಿವೆ. ಆದರಲ್ಲೂ ನನ್ನ ತಾಲ್ಲೂಕಿನಿಂದ ಬಹಳಷ್ಟು ರೋಡುಗಳು ಹೋಗುತ್ತಿವೆ. ಸುಮಾರು, ನನ್ನ ತಾಲ್ಲೂಕಿನಿಂದ 4-5ಜಿಲ್ಲೆಗಳಲ್ಲಿ ಆಂಧ್ರಪ್ರದೇಶಕ್ಕೆ ಹೋಗಿವೆ. ಇದರಲ್ಲಿ ಒಂದನ್ನು ಮಾತ್ರ ತೆಗೆದುಕೊಂಡಿದ್ದಾರೆ. ಇನ್ನುಳಿದ 8 ರಸ್ತೆಗಳನ್ನೂ ತೆಗೆದುಕೊಂಡು, ದುರಸ್ತಿ ಮಾಡಬೇಕೆಂದು ಹೇಳುತ್ತೇನೆ. ಈಗಿರತಕ್ಕ ಹಗರಿ ಸೇತುವೆ ಬಹಳ ಕೆಟ್ಟುಹೋಗುವ ಪರಿಸ್ಥಿತಿಯಲ್ಲಿದ್ದು ಬೀಳತಕ್ಕ ಪರಿಸ್ಥಿತಿಯಲ್ಲಿದೆ. ಇದನ್ನು ಹೊಸದು ಮಾಡುತ್ತಿದ್ದೀರಿ. ಕೆಲವು ಸ್ಪಾನ್‌ಗಳು ಇನ್ನೂ ಆಗಿಲ್ಲ. ಇದನ್ನು ಹೇಗಾದರೂ ಮಾಡಿ, ಮುಂದಿನ ವರ್ಷದೊಳಗಡೆ ಪೂರ್ತಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್:– ಸ್ವಾಮಿ, ಮಾನ್ಯ ಸದಸ್ಯರ ಕೊನೆಯ ಪ್ರಶ್ನೆ, ಸೇತುವೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಬಹಳಷ್ಟು ಕೆಲಸ ನಡೆದಿದೆ. ಇದು ಸುಮಾರು 210ಲಕ್ಷದ ಕೆಲಸ. ಭೂಮಿ ಸ್ವಲ್ಪ ಅಕ್ವೈರ್ ಮಾಡಬೇಕಾಗಿತ್ತು. ಅದೂ ಕೂಡ ಆಗಿದೆ. ಮತ್ತೆ ಒಂದು ಭಾಗದಲ್ಲಿ ಡಿಸೈನ್ ಕೂಡ ಬದಲಾವಣೆ ಮಾಡಬೇಕಾಗಿತ್ತು. ಅದನ್ನೂ ಮಾಡಿ, ಈಗ ಮುಗಿದಿದೆ, ಹೀಗಾಗಿ, ಆ ಕೆಲಸವನ್ನು ಅತಿ ಶೀಘ್ರವಾಗಿ ಪೂರೈಸುತ್ತೇವೆ. ಮತ್ತು ವಾಹನ ಸಂಚಾರಕ್ಕೆ ಅನುಕೂಲ ಮಾಡತಕ್ಕ ವ್ಯವಸ್ಥೆ ಮಾಡಲಾಗುತ್ತಿದೆ. ಆಮೇಲೆ, ಮಳೆ ಹಾನಿಯಲ್ಲಿ ಏನು ತೊಂದರೆಯಾಗಿದೆ ಎಂದರೆ, ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 13,34,12,000 ಕಾಮಗಾರಿಗಳಿಗೆ ಅಂದಾಜು ಮಾಡಲಾಗಿದೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದ್ದು, ಕೇವಲ 21,55,000 ಮತ್ತು 12,45,000 ರೂಪಾಯಿಗಳ ಕೆಲಸಗಳು ತ್ವರಿತಗತಿಯಲ್ಲಿ ನಡೆಯುತ್ತಿವೆ. ಹಾಗೂ ಇನ್ನೂ ಮಾಡಬೇಕಾಗಿದೆ, ಅದನ್ನು ಮಾಡವುದಕ್ಕೆ ಹಣ ಬಂದಮೇಲೆ,ಮಾಡಲಾಗುತ್ತದೆ. ಮತ್ತೆ 9 ರೋಡುಗಳೀನಿವೆ, ಆಂಧ್ರಪ್ರದೇಶಕ್ಕೆ ಸೇರತಕ್ಕಂಥ ರಸ್ತೆಗಳು, ಅದರಲ್ಲಿ ಒಂದು ರಸ್ತೆಯನ್ನು, inter-state importance and economic importance ಆ ಹಣದ ಅಡಿಯಲ್ಲಿ ತೆಗೆದುಕೊಂಡಿದ್ದೇವೆ. ಸುಮಾರು 60 ಲಕ್ಷದ ಕಾಮಗಾರಿ, 20-22 ಕಿಲೋಮೀಟರ್ ಉದ್ದದ ರಸ್ತೆ ಇದೆ. ಇದನ್ನು ವ್ಯವಸ್ಥೆ ಮಾಡಿ, ಮುಗಿಸತಕ್ಕ ಕೆಲಸ ನಡೆಯುತ್ತಾ ಇದೆ. ಇನ್ನು ಎಂಟು ರಸ್ತೆಗಳನ್ನು, ನಮ್ಮ ಬಜೆಟ್ ಏನಿದೆ, ಅದರಲ್ಲಿ repairs and maintenance ನಿಂದ ಭರಿಸತಕ್ಕ ಹಣದಲ್ಲಿ ಆ ಕೆಲಸ ನಡೆಯುತ್ತದೆ. ಆದ್ದರಿಂದ ಮಾನ್ಯಸದಸ್ಯರ ಅಭಿಪ್ರಾಯ ಏನಿದೆ, ಇದನ್ನು ಶೀಘ್ರವಾಗಿ ಮಾಡಬೇಕೆನ್ನುವಂಥದ್ದು, ಇದು ಸರ್ಕಾರದ ಗಮನದಲ್ಲಿದೆ, ಕೆಲಸ ನಡೆಯುತ್ತಾ ಇದೆ.

ಶ್ರೀ ಅಲ್ಲಂ ವೀರಭದ್ರಪ್ಪ:– ಅತಿ ಮುಖ್ಯವಾದ ಎರಡು ರೋಡುಗಳು ಎಂದರೆ, ಮಂತ್ರಾಲಯದಿಂದ ಒಂದು ಶ್ರೀಶೈಲಕ್ಕೆ ಹೋಗುತ್ತದೆ. ಉತ್ತರ ಕರ್ನಾಟಕದ, ಪುಣ್ಯಕ್ಷೇತ್ರಗಳಿಗೆ ಬಹಳಷ್ಟು ಜನ ಹೋಗುತ್ತಾರೆ. ನಮ್ಮ ಭಾಗದಿಂದ, ಆಂಧ್ರ ಭಾಗಕ್ಕೆ ಹೋಗತಕ್ಕ ಈ ರೋಡುಗಳು ಬಹಳ ಕೆಟ್ಟು ಹೋಗಿವೆ. ಆದರೆ, ಆಂಧ್ರ ಬಾರ್ಡರಿನಲ್ಲಿ ರೋಡುಗಳು ಬಹಳ ಚೆನ್ನಾಗಿವೆ. ಬಹಳಷ್ಟು ಜನ ಕರ್ನಾಟಕ ಸ್ಟೇಟ್‌ಗೆ ಬಂದ ಕೂಡಲೇ ಇವು ಕರ್ನಾಟಕ ರೋಡುಗಳು ಎಂಬ ಅಭಿಪ್ರಾಯ ಬಂದಿದೆ. ಇದನ್ನು ಹೇಗಾದರೂ ಮಾಡಿ ಸರಿಪಡಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್:– ಮೊದಲು ವ್ಯಾಪಾರ, ಉದ್ದಿಮೆ ಈ ಭಾಗಗಳ ಸಂಚಾರಕ್ಕೆ ಆದ್ಯತೆ ಕೊಟ್ಟು, ತದನಂತರ, ಪುಣ್ಯ ಕ್ಷೇತ್ರಗಳಿಗೆ ಆದ್ಯತೆ ಕೊಡಬೇಕು.